

## ಕಡೆಗೋಲು ನುಂಗಿದ ವಿದ್ಯುತ್

ಹಿಂದೆ ಉಪಯೋಗಿಸುತ್ತಿದ್ದ ಕಡೆಗೋಲು, ಕಡೆಯುವ ಕಲ್ಲು, ಬೀಸುವ ಕಲ್ಲುಗಳು ಈಗ ಮರೆಯಾಗಿ ಅವುಗಳ ಸ್ಥಾನವನ್ನು ಮಿಕ್ಸರ್, ಗ್ರೈಂಡರ್‌ಗಳು ಆಕ್ರಮಿಸಿಕೊಂಡಿವೆ. ಹಿಂದೆ ಹಳ್ಳಿಗಳಲ್ಲಿ ಹೆಂಗಸರು ಕಡೆಗೋಲು ಉಪಯೋಗಿಸಿ ಮಜ್ಜಿಗೆ ಕಡೆದು ಬೆಣ್ಣೆ ತೆಗೆಯುತ್ತಿದ್ದರು. ಸಾಂಬಾರು ಮಾಡಲು ಖಾರವನ್ನು ಕಲ್ಲಿನಲ್ಲಿ ಕಡೆಯುತ್ತಿದ್ದರು. ಅಕ್ಕಿ, ರಾಗಿ ಹಿಟ್ಟನ್ನು ಬೀಸುವ ಕಲ್ಲಿನಲ್ಲಿ ಹೆಂಗಸರು ಹಾಡು ಹೇಳುತ್ತಾ ತುಂಬಾ ಖುಷಿಯಿಂದ ಬೀಸುತ್ತಿದ್ದರು. ಈ ಪ್ರಕ್ರಿಯೆ ಮನಸ್ಸಿಗೆ ಮುದ ನೀಡುವುದರ ಜೊತೆಗೆ ದೇಹಕ್ಕೂ ಒಳ್ಳೆಯ ವ್ಯಾಯಾಮವಾಗುತ್ತಿತ್ತು. ಹಾಗಾಗಿ ಹಿಂದಿನವರು ಯಾವುದೇ ಕಾಯಿಲೆ ಇಲ್ಲದೆ ನೂರು ವರ್ಷಗಳ ಆಸುಪಾಸಿನಲ್ಲಿ ಬದುಕಿ ಬಾಳುತ್ತಿದ್ದರು. ಅಡುಗೆ ಮನೆಯೊಳಗೆ ಈಗ ಆಧುನಿಕ ಪದ್ಧತಿ ನುಸುಳಿದ ನಂತರ ಹಿಂದಿನ ಪದ್ಧತಿಗಳು ಕಣ್ಮರೆಯಾಗಿವೆ.

ಕಡೆಗೋಲು ಜಾಗಕ್ಕೆ ಮಿಕ್ಸಿಗಳು ವಕ್ಕರಿಸಿದ್ದು, ವಿದ್ಯುತ್ ಬಳಸಿ ಸುಲಭವಾಗಿ ಬೆಣ್ಣೆ ತೆಗೆಯಲಾಗುತ್ತಿದೆ. ವಿದ್ಯುತ್ ನಮ್ಮ ಜೀವನದ ಅವಿಭಾಜ್ಯ ಅಂಗವಾಗಿಬಿಟ್ಟಿದೆ. ವಿದ್ಯುತ್ ಇಲ್ಲದಿದ್ದರೆ ಆ ದಿನ ಉಪವಾಸ, ಇಲ್ಲವೇ ಊಟ ತಿಂಡಿಗಳಿಗೆ ಹೋಟೆಲ್‌ಗಳನ್ನು ಆಶ್ರಯಿಸಬೇಕಾಗುತ್ತದೆ. ಬೆಣ್ಣೆ ತೆಗೆಯುವ ನೆಪದಲ್ಲಾದರೂ ಕಡೆಗೋಲು ಬಳಸುತ್ತಿದ್ದ ಜನ ಈಗ ಸುಲಭ ವಿಧಾನದ ಮೊರೆಹೋಗಿದ್ದಾರೆ. ಚಿತ್ರದಲ್ಲಿ ಕಾಣುತ್ತಿರುವ ಕಡೆಗೋಲು, ಕಡೆಯುವ ಕಲ್ಲು, ಬೀಸುವ ಕಲ್ಲುಗಳನ್ನು ಈಗಲೇ ಚಿತ್ರಗಳಲ್ಲಿ ನೋಡುವ ಪರಿಸ್ಥಿತಿ ಬಂದಿರುವುದು ಶೋಚನೀಯ.

—ಚಾವಲ್ಮನೆ ಸುರೇಶ್ ನಾಯಕ್, ಚಿಕ್ಕಮಗಳೂರು

## ಕಹಿಯಿಲ್ಲದ ಮಡಹಾಗಲ

ಕುಂದಾಪುರದ ಆಯುರ್ವೇದ ವೈದ್ಯರೊಬ್ಬರ ಮನೆಯ ಹಿತ್ತಲಲ್ಲಿ ಎಕ್ಕೆ ಗಿಡವೊಂದರ ಆಶ್ರಯದಲ್ಲಿ ಕಾಡುಹಾಗಲ (ಮಡಹಾಗಲ) ಬಳ್ಳಿ ಹಬ್ಬಿತ್ತು. ಬಳ್ಳಿಯಲ್ಲಿ ಕೆಲ ಕಾಯಿಗಳು ನೇತಾಡುತ್ತಿದ್ದವು. ಕುತೂಹಲದಿಂದ ವೈದ್ಯರನ್ನು ಕೇಳಿದೆ. ಅದಕ್ಕವರು ಮಡಹಾಗಲ ಎಂದರು. ಇದೊಂದು ಕಾಡುಬಳ್ಳಿಯಾಗಿದ್ದು, ಮಲೆನಾಡು ಹಾಗೂ ಕೊಡಗಿನ ಅರಣ್ಯ ಪ್ರದೇಶಗಳಲ್ಲಿ ಸ್ವಾಭಾವಿಕವಾಗಿ ಬೆಳೆಯುವ ಬಳ್ಳಿಯಾಗಿದೆ. ಜನರು ಅದನ್ನು ಕೊಯ್ದು ತಂದು ಮಾರಾಟ ಮಾಡುವುದನ್ನು ಮಲೆನಾಡು ಭಾಗದಲ್ಲಿ ಕಾಣಬಹುದು. ವೈದ್ಯರು ಕಾಡಿನಿಂದ ಈ ಬಳ್ಳಿಯ ಗಡ್ಡೆಯನ್ನು ತಂದು ತಮ್ಮ ಹಿತ್ತಲಲ್ಲಿ ಬೆಳೆದಿದ್ದರು.

ಮಳೆಗಾಲದಲ್ಲಿ ಕಾಯಿ ಬಿಡುವ ಮಡಹಾಗಲದ ಹೂವುಗಳು ಹಳದಿ ಬಣ್ಣದಲ್ಲಿರುತ್ತವೆ. ಹಾಗಲ ಅಂತ ಹೆಸರಿದ್ದರೂ ಇದು ಕಹಿ ಇರುವುದಿಲ್ಲ. ಇದರಿಂದ ಪಲ್ಯ, ಸಾಂಬಾರು ಮಾಡಬಹುದು. ಹಲವು ವಿಟಮಿನ್, ಕ್ಯಾಲ್ಸಿಯಂ ಮತ್ತು ಅಧಿಕ ನಾರಿನಂಶವನ್ನು ಈ ಹಾಗಲ ಒಳಗೊಂಡಿರುತ್ತದೆ. ಆರೋಗ್ಯಕ್ಕೂ ಪೂರಕವಾದ ಈ ಕಾಯಿಗಳನ್ನು ಬೆಳೆಯಲು ಪ್ರಯತ್ನಿಸಬಹುದು.

—ಶಾಲಿನಿ ನಾಯಕ್, ಬೆಂಗಳೂರು





## ಶಿವನ ಅಂಗಳದಲ್ಲಿ ನರಸಿಂಹಾವತಾರ

ಪೆರೂರ್ ಪತೀಶ್ವರರ್ ದೇವಸ್ಥಾನವು ತಮಿಳುನಾಡಿನ ಕೊಯಮತ್ತೂರಿನ ಪಶ್ಚಿಮ ಭಾಗದಲ್ಲಿರುವ ಪೆರೂರ್‌ನಲ್ಲಿರುವ, ಶಿವನಿಗೆ ಅರ್ಪಿತವಾದ ಹಿಂದೂ ದೇವಾಲಯ. ಇದನ್ನು ಸುಮಾರು 2ನೇ ಶತಮಾನದಲ್ಲಿ ಕರಿಕಾಲ ಚೋಳನು ನಿರ್ಮಿಸಿದನಂತೆ. ಪಟ್ಟೀಶ್ವರರ್ ಎಂದು ಕರೆಯುವ ಶಿವನು ಪಚ್ಚೆನಾಯಕಿ ಎಂದು ಕರೆಯುವ ತನ್ನ ಪತ್ನಿ ಪಾರ್ವತಿಯೊಂದಿಗೆ ಇಲ್ಲಿ ನೆಲೆಸಿದ್ದಾನೆ ಎಂಬ ಐತಿಹ್ಯವಿದೆ.

ಈ ದೇವಾಲಯವು ಹಲವಾರು ಗೋಪುರಗಳು ಮತ್ತು ಸಭಾಂಗಣಗಳನ್ನು ಹೊಂದಿದೆ. ಈ ದೇವಾಲಯದ ಸೀಲಿಂಗ್ ಅನ್ನು ಕಲ್ಲಿನ ಸರಪಳಿಗಳ ಜಾಲದಿಂದ ಮುಚ್ಚಲಾಗಿದೆ. ಅದ್ಭುತ, ಮತ್ತು ಸಂಕೀರ್ಣವಾದ ವಾಸ್ತುಶಿಲ್ಪ ಕಲಾ ಸೌಂದರ್ಯವನ್ನು ಹೊಂದಿರುವ ಈ ದೇಗುಲದಲ್ಲಿನ ಸ್ತಂಭಗಳಲ್ಲಿ ಅಲಂಕರಿಸಲಾಗಿರುವ ಸುಂದರ ಕೆತ್ತನೆಗಳು ಪುರಾಣ ಪ್ರಸಿದ್ಧ ಸಂಗತಿಗಳನ್ನು ತಿಳಿಸುತ್ತವೆ. ಇದು ದೇವಾಲಯದ ನಿರ್ಮಾಪಕರು ಮತ್ತು ಭಕ್ತರ ಕಲಾತ್ಮಕ ಮತ್ತು ಆಧ್ಯಾತ್ಮಿಕ ಶ್ರೇಷ್ಠತೆಯನ್ನು ಪ್ರದರ್ಶಿಸುತ್ತದೆ. ಈ ದೇವಾಲಯದ ಕಂಬವೊಂದರ ಮೇಲಿನ ನರಸಿಂಹಾವತಾರದ ಸುಂದರ ಕೆತ್ತನೆ ಮನಸೆಳೆಯುತ್ತದೆ.

—ಎಸ್. ಪ್ರಭಾವತಿ, ಬೆಂಗಳೂರು